**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 364/2023**

ಚಾ.ಸಾ–04, ಪ್ರಾ.ಸಾ–05

| | | |
|---|---|---|
| ಹೆಸರು | : | ಲಕ್ಷ್ಮಿ |
| ಗಂಡನ ಹೆಸರು | : | ವೆಂಕಟೇಶ್ ಬಿ. |
| ವಯಸ್ಸು | : | 44 |
| ವೃತ್ತಿ | : | ಉಪ ತಹಶೀಲ್ದಾರ್, ನಾಡಕಚೇರಿ, ಮೂಗುರು |
| ವಾಸ | : | ಮೈಸೂರು |

**ದಿನಾಂಕ 08.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

[

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ಮೂಗೂರು ನಾಡ ಕಚೇರಿಯಲ್ಲಿ ನಾನು 02.09.2021 ರಿಂದ ಇಲ್ಲಿಯವರೆಗೂ ಉಪ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಮೂಗೂರಿನ ಶ್ರೀ ತ್ರಿಪುರ ಸುಂದರಿ ದೇವರಿಗೆ ದಾನಿಗಳು ನೀಡಿದ್ದ ಚಿನ್ನದ ಒಂದು ಜೊತೆ ಹುಬ್ಬುಗಳು, ಒಂದು ಕೆಂಪು ಹರಳು ಇರುವ ಚಿನ್ನದ ಒಂದು ಹಣೆಬಟ್ಟು, ಚಿನ್ನದ ಒಂದು ತಾಳಿ, ಚಿನ್ನದ ಒಂದು ಅಭಯ ಹಸ್ತ, ಚಿನ್ನದ ಒಂದು ವರಹಾ ಹಸ್ತ, ಚಿನ್ನದ ಒಂದು ಮೂಗುತಿ, 18 ಲಕ್ಷ್ಮೀ ಚಿತ್ರವಿರುವ ಒಂದು ಚಿನ್ನದ ಸರದ ಆಭರಣಗಳನ್ನು ಆ ದೇವರಿಗೆ ಹಾಕಿ ಪ್ರತಿದಿನ ಸರದಿಯ ಪ್ರಕಾರ ಪೂಜೆ ಮಾಡಲಾಗುತ್ತಿತ್ತು.

ದಿನಾಂಕ 17.07.2022 ರಂದು ಬೆಳಿಗ್ಗೆ ಸುಮಾರು 7.30 ಗಂಟೆ ಸಮಯದೊಳಗೆ ಫ್ರಾಸಾ–2 ರವರು ದೇವಸ್ಥಾನಕ್ಕೆ ಹೂವನ್ನು ಕೊಡಲು

ಬಂದಿದ್ದಾಗ ದೇವಸ್ಥಾನದ ಬಾಗಿಲು ತೆರೆದಿದ್ದು, ಬೀಗಗಳು ಕೆಳಗೆ ಬಿದ್ದಿದ್ದು, ಅವರು ಆ ವಿಷಯವನ್ನು ಫ್ರಾಸಾ-3 ರವರಿಗೆ ತಿಳಿಸಿದರು.

ನಂತರ ಫ್ರಾಸಾ-3 ರವರು ಘಟನಾ ಸ್ಥಳಕ್ಕೆ ಬಂದು ಘಟನೆಯ ಕುರಿತು ನನಗೆ, ಚಾಸಾ-5 ಮತ್ತು 10 ರವರಿಗೆ ತಿಳಿಸಿದರು. ನಂತರ ನಾವು ಸ್ಥಳಕ್ಕೆ ಬಂದು ನೋಡಿದಾಗ ಈ ಮೇಲೆ ಹೇಳಿದ ಆಭರಣಗಳು ಮತ್ತು ಹುಂಡಿಯಲ್ಲಿದ್ದ ಹಣವು ಕಳವಾಗಿದ್ದವು.

ದಿನಾಂಕ 20.07.2022 ರಂದು ಸದರಿ ಆಭರಣಗಳು ದೊರೆತವು ಎಂದು ಪೊಲೀಸರು ನಮಗೆ ತಿಳಿಸಿದರು. ಅವುಗಳನ್ನು ನಾನು ನೋಡಿ ಗುರುತಿಸಿದೆನು. ನಾನು ಘಟನೆಯ ಕುರಿತು ಪೊಲೀಸರಿಗೆ ಹೇಳಿದ್ದೇನೆ.

**ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ 1ನೇ ಆರೋಪಿತನ ಪರವಾಗಿ**

ನನಗೆ ಕಚೇರಿಯ ಅವಧಿ ಬೆಳಿಗ್ಗೆ 10.00 ಗಂಟೆಯಿಂದ ಇದೆ. ದೇವಸ್ಥಾನದಲ್ಲಿ ಕಳುವಾಗಿದ್ದ ಎಲ್ಲಾ ಆಭರಣಗಳು ದೊರೆತಿವೆ ಎಂದರೆ ಸರಿ. ಯಾರು ಕಳುವು ಮಾಡಿದ್ದಾರೆಂದು ಪೊಲೀಸರು ನನಗೆ ಹೇಳಿಲ್ಲ ಎಂದರೆ ಸರಿ.

ನಾನು ದೇವಸ್ಥಾನಕ್ಕೆ ಬೆಳಿಗ್ಗೆ 10.00 ಗಂಟೆಯೊಳಗೆ ಹೋಗಿದ್ದೆ. ನನಗೆ ಘಟನೆಯ ಪ್ರತ್ಯಕ್ಷ ಮಾಹಿತಿ ಇರದೆ ಫ್ರಾಸಾ-3 ರವರ ಹೇಳಿಕೆ ಮೇರೆಗೆ ಘಟನೆಯ ಕುರಿತು ಹೇಳುತ್ತಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ತಿ.ನರಸೀಪುರ**

**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ 364/2023**

ಚಾ.ಸಾ-05, ಪ್ರಾ.ಸಾ-06

| | | |
|---|---|---|
| ಹೆಸರು | : | ಬಿ. ಬಸವರಾಜು |
| ತಂದೆಯ ಹೆಸರು | : | ಲೇಟ್ ಬೋಗನಾಯಕ |
| ವಯಸ್ಸು | : | 55 |
| ವೃತ್ತಿ | : | ಕಂದಾಯ ರಾಜಸ್ವ ನಿರೀಕ್ಷಕರು, ನಾಡಕಚೇರಿ ಮೂಗುರು |
| ವಾಸ | : | ತಿ. ನರಸೀಪುರ |

**ದಿನಾಂಕ 08.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ಮೂಗೂರು ನಾಡ ಕಚೇರಿಯಲ್ಲಿ ಕಂದಾಯ ನಿರೀಕ್ಷರಾಗಿ ದಿನಾಂಕ 15.10.2019 ರಿಂದ ಇಲ್ಲಿಯವರೆಗೂ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಮೂಗೂರಿನ ಶ್ರೀ ತ್ರಿಪುರ ಸುಂದರಿ ದೇವರಿಗೆ ಮುಜರಾಯಿ ಇಲಾಖೆ ನೀಡಿದ್ದ ಚಿನ್ನದ ಒಂದು ಜೊತೆ ಹುಬ್ಬುಗಳು, ಒಂದು ಕೆಂಪು ಹರಳು ಇರುವ ಚಿನ್ನದ ಒಂದು ಹಣೆಬಟ್ಟು, ಚಿನ್ನದ ಒಂದು ತಾಳಿ, ಚಿನ್ನದ ಒಂದು ಅಭಯ ಹಸ್ತ, ಚಿನ್ನದ ಒಂದು ಮೂಗುತಿ, 18 ಲಕ್ಷ್ಮೀ ಚಿತ್ರವಿರುವ ಒಂದು ಚಿನ್ನದ ಸರದ ಆಭರಣಗಳನ್ನು ಆ ದೇವರಿಗೆ ಹಾಕಿ ಪ್ರತಿದಿನ ಸರದಿಯ ಪ್ರಕಾರ ಪೂಜೆ ಮಾಡಲಾಗುತ್ತಿತ್ತು.

ಸಿಸಿ ಸಂಖ್ಯೆ: **364/2023**

ದಿನಾಂಕ 17.07.2022 ರಂದು ಬೆಳಿಗ್ಗೆ ಸುಮಾರು 7.00 ಗಂಟೆ ಸಮಯದಲ್ಲಿ ಫ್ರಾಸಾ-1 ರವರು ನನಗೆ ದೂರವಾಣಿ ಕರೆ ಮಾಡಿ ಈ ಮೇಲೆ ಹೇಳಿದ ಆಭರಣಗಳು ಕಳುವಾಗಿದೆ ಎಂದು ತಿಳಿಸಿದರು.

ನಂತರ ನಾನು ಘಟನಾ ಸ್ಥಳಕ್ಕೆ ಬಂದಾಗ ದೇವಸ್ಥಾನದಲ್ಲಿದ್ದ ಬೀರು ತೆರೆದಿತ್ತು. ದೇವಸ್ಥಾನದಲ್ಲಿದ್ದ ಹುಂಡಿಯನ್ನು ಹೊಡೆದು ಹಣವನ್ನು ಕಳವು ಮಾಡಲಾಗಿತ್ತು.

ದಿನಾಂಕ 20.07.2022 ರಂದು ಪೊಲೀಸರು ಘಟನಾ ಸ್ಥಳದಲ್ಲಿ ಪಂಚನಾಮವನ್ನು ಮಧ್ಯಾಹ್ನ 1.30 ರಿಂದ 2.30 ಸಮಯದಲ್ಲಿ ಜರುಗಿಸಿದರು. ಆ ವೇಳೆಗೆ 5 ಜನ ಆರೋಪಿತರು ಇದ್ದರು. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತ ಕೂಡ ಆ ವೇಳೆಗೆ ಇದ್ದನು. ಪಂಚನಾಮಕ್ಕೆ ನಾನು ಸಹಿ ಮಾಡಿದ್ದೇನೆ. ಆ ಪಂಚನಾಮವು ದೃಢೀಕೃತ ಪ್ರತಿಯಾಗಿರದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿಲ್ಲ. ಸದರಿ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ನಾನು ಘಟನೆಯ ಕುರಿತು ಪೊಲೀಸರಿಗೆ ಹೇಳಿದ್ದೇನೆ.

**<u>ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ 1ನೇ ಆರೋಪಿತನ ಪರವಾಗಿ</u>**

ದೇವಸ್ಥಾನದಲ್ಲಿ ಕಳುವಾಗಿದ್ದ ಎಲ್ಲಾ ಆಭರಣಗಳು ದೊರೆತಿವೆ ಎಂದರೆ ಸರಿ. ಯಾರು ಕಳುವು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ಘಟನೆಯ ಪ್ರತ್ಯಕ್ಷ ಮಾಹಿತಿ ಇರದೆ ಫ್ರಾಸಾ-1 ರವರ ಹೇಳಿಕೆ ಮೇರೆಗೆ

ಘಟನೆಯ ಕುರಿತು ಹೇಳುತ್ತಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ತಿ.ನರಸೀಪುರ**